Govt. of Karnataka [C.R.P. 67

Deposition Sheets (R.P. No. 57) Form No. 4 (Criminal)

**ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ., ನ್ಯಾಯಾಲಯ, ಮಧುಗಿರಿ**

ಪ್ರಕರಣ ಸಂಖ್ಯೆ: **2372/2023**

ದಿನಾಂಕ: **20-08-2025** ರಂದು ಸಾಕ್ಷಿಗೆ ಪ್ರಮಾಣ ವಚನವನ್ನು ಭೋದಿಸಲಾಯಿತು.

| ಸಿಡಬ್ಲ್ಯೂ: | 1 | ಪಿಡಬ್ಲ್ಯೂ | 1 |
|---|---|---|---|
| ಹೆಸರು | ಅಜ್ಜಪ್ಪ | | |
| ತಂದೆ / ಗಂಡನ ಹೆಸರು | ಹನುಮಪ್ಪ | | |
| ವಯಸ್ಸು | 36 ವರ್ಷ | | |
| ಉದ್ಯೋಗ | ವ್ಯವಸಾಯ | | |
| ವಾಸ | ಸುದ್ದೇಕುಂಟೆ | | |

ಮುಖ್ಯ ವಿಚಾರಣೆ: ಎ ಪಿ ಪಿ ರವರಿಂದ:

ನ್ಯಾಯಾಲಯದ ಮುಂದೆ ಇರುವ ಆರೋಪಿ ನಮ್ಮ ಊರಿನವರು.

ಸಾಕ್ಷಿಯು ಪಂಚನಾಮೆ , ಶೋಧನಾ ವಾರಂಟ್ ಮತ್ತು ಮಾಧರಿ ಸೀಲ್ ನ್ನು ನೋಡಿ ಗುರ್ತಿಸಿದ್ದು ಅವುಗಳನ್ನು ನಿಪಿ-1 ರಿಂದ 3 ಎಂದು ಸಾಕ್ಷಿಯ ಸಹಿಗಳನ್ನು ನಿಪಿ-1(ಎ) ರಿಂದ 3(ಎ) ಎಂದು ಗುರುತಿಸಲಾಯಿತು. ನಾನು ಮಧುಗಿರಿಯ ಟಿ.ವಿ ಕಾಲೇಜಿನ ಹತ್ತಿರ ನಿಪಿ-1 ರಿಂದ 3ರ ದಾಖಲೆಗಳಿಗೆ ಸುಮಾರು 3 ವರ್ಷಗಳ ಹಿಂದೆ, ಪೊಲೀಸರು ಹೇಳಿದ್ದರಿಂದ ನಿಪಿ-1 ರಿಂದ 3ರ ದಾಖಲೆಗಳಿಗೆ ಸಹಿ ಮಾಡಿರುತ್ತೇನೆ. ನಿಪಿ-1 ರಿಂದ 3ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ಪೊಲೀಸರು ನನ್ನ ಸಮಕ್ಷಮ ಯಾವುದೇ ಮಹಜರ್ ಜರುಗಿಸಿರುವುದಿಲ್ಲ ಮತ್ತು ಮು.ಮಾಲುಗಳನ್ನು ವಶಕ್ಕೆ ತೆಗೆದುಕೊಂಡಿರುವುದಿಲ್ಲ.

(ಈ ಹಂತದಲ್ಲಿ ಸಾಕ್ಷಿಯನ್ನು ಪೂರ್ಣ ಪ್ರಮಾಣದ ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಎಪಿಪಿ ರವರು ಅನುಮತಿ ಕೋರಿರುತ್ತಾರೆ. ದಾಖಲೆಗಳನ್ನು ಪರಿಶೀಲಿಸಿ ಅನುಮತಿಸಿದೆ.)

ಪಾಟೀ ಸವಾಲುಃ ಮಾನ್ಯ ಎಪಿಪಿ ರವರಿಂದಃ

ದಿಃ 13-04-2023 ರಂದು ಸಂಜೆ 4.00 ಗಂಟೆ ಸಮಯದಲ್ಲಿ ಅಬಕಾರಿ ಉಪನಿರೀಕ್ಷಕರಿಗೆ ಬಂದ ಮಾಹಿತಿಯ ಮೇರೆಗೆ ಸುದ್ದೇನಕುಂಟೆ ಗ್ರಾಮದಲ್ಲಿ ಅಕ್ರಮವಾಗಿ ಮದ್ಯ ಮಾರಾಟ ಮಾಡುತ್ತಿರುವುದು ತಿಳಿದುಬಂದಿದ್ದು, ಅಬಕಾರಿ ಉಪನಿರೀಕ್ಷಕರು, ಸಿಬ್ಬಂದಿಗಳು, ಸರ್ಕಾರಿ ಇಲಾಖಾ ವಾಹನ ರಲ್ಲಿ ಹೊರಟು, ನಮ್ಮ ಹತ್ತಿರ ಬಂದು ನಮ್ಮನ್ನು ಪರಿಚಯ ಮಾಡಿಕೊಂಡು ಅವರಿಗೆ ಬಂದ ಮಾಹಿತಿಯನ್ನು ತಿಳಿಸಿ ಪಂಚರಾಗಿ ಸಹಕರಿಸಲು ಕೇಳಿಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಆಗ ನಾವು ಪಂಚರಾಗಿ ಸಹಕರಿಸಲು ಒಪ್ಪಿಕೊಂಡಿರುತ್ತೇವೆ ಮತ್ತು ನಮ್ಮನ್ನು ಕರೆದುಕೊಂಡು ಆರೋಪಿಯ ಮನೆಯ ಹತ್ತಿರ ಹೋಗಿ, ಅಬಕಾರಿ ಉಪನಿರೀಕ್ಷಕರು ರವರು ಸ್ಥಳದಲ್ಲಿ ಶೋಧನಾ ವಾರೆಂಟ್ ನ್ನು ಬರೆದುಕೊಂಡು ನಮ್ಮ ಸಹಿ ಪಡೆದುಕೊಂಡಿರುತ್ತಾರೆ ಎಂದರೆ ಸರಿಯಲ್ಲ. ಮನೆಯ ಒಳಗೆ ಹೋಗಿ, ನೋಡಲಾಗಿ ಮಧ್ಯದ ಕೋಣೆಯಲ್ಲಿ ಮಂಚದ ಕೆಳಗೆ ಪ್ಲಾಸ್ಟಿಕ್ ಚೀಲ ಬಿಚ್ಚಿ ನೋಡಲಾಗಿ ಅದರಲ್ಲಿ 90 ಎಂ ಎಲ್ ನ 192 ರಿಜಿನಲ್ ಚಾಯ್ಸ್ ಟೆಟ್ರಾ ಪ್ಯಾಕೆಟ್ ಗಳು , ಮದ್ಯ ಇರುವುದು ಕಂಡು ಬಂದಿರುತ್ತದೆ ಎಂದರೆ ನನಗೆ ಗೊತ್ತಿಲ್ಲ. ಪರವಾನಿಗೆ ಇದೆಯಾ ಎಂದು ಕೇಳಲಾಗಿ, ಪರವಾನಿಗೆ ಇಲ್ಲ ಎಂದು ತಿಳಿಸಿರುತ್ತಾರೆ ನನಗೆ ಗೊತ್ತಿಲ್ಲ . ನಂತರ ಅಬಕಾರಿ ಉಪನಿರೀಕ್ಷಕರು ದೊರೆತ ಮದ್ಯದಲ್ಲಿ ರಾಸಾಯನಿಕ ಪರೀಕ್ಷೆಗಾಗಿ 90 ಎಂ ಎಲ್ ನ 30 ಒರಿಜಿನಲ್ ಚಾಯ್ಸ್ ಟೆಟ್ರಾ ಪ್ಯಾಕೆಟ್ ಗಳನ್ನು , ಪ್ರತ್ಯೇಕವಾಗಿ ತೆಗೆದು ಬಿಳಿ ಚೀಲದಲ್ಲಿ ತುಂಬಿ ದಾರ ಕಟ್ಟಿ ಇಲಾಖೆ ಮೊಹರನ್ನು ಹಾಕಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ಪಂಚರ ಸಮಕ್ಷಮ ಪಂಚನಾಮೆಯನ್ನು ಸಂಜೆ 4.30 ರಿಂದ 5.30 ಗಂಟೆಯವರೆಗೆ ಮಾಡಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ನನಗೆ ಎಲ್ಲಾ ವಿಚಾರಗಳು ಗೊತ್ತಿದ್ದರೂ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಇಲ್ಲ.

ಮರುವಿಚಾರಣೆ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಕಂಪ್ಯೂಟರೀಕರಣಗೊಳಿಸಿ ಪ್ರಿಂಟ್ ತೆರೆಯಲಾಯಿತು.)

ಓ. ಹೇ. ಕೇ. ಸರಿ. ಇದೆ.

ಅಧಿಕ ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಮ್.ಎಫ್.ಸಿ. ಮಧುಗಿರಿ